ಘಟನೆ ಉಲ್ಲೇಖಾರ್ಹ. 19ನೇ ಶತಮಾನದ ವಿಜ್ಞಾನಿ ಕೆಕುಲೆ ಹಲವು ವರ್ಷಗಳು ಬೆನ್‌ಜೀನ್‌ನ ಆಣ್ವಿಕ ಸಂರಚನೆಯ ಬಗ್ಗೆ ಸಂಶೋಧನೆ ಮಾಡುತ್ತಿದ್ದರೂ ಫಲ ಕೊಟ್ಟಿರಲಿಲ್ಲ. ಅವರ ಕನಸಿನಲ್ಲೊಮ್ಮೆ ಪ್ರಾಚೀನ ಗ್ರೀಕ್ ಪೌರಾಣಿಕ ಸಂಕೇತವೊಂದು ಕಾಣಿಸಿಕೊಂಡಿತಂತೆ; ಹಾವೊಂದು ತನ್ನ ಬಾಲವನ್ನು ತಾನೆ ಕಚ್ಚುತ್ತಿರುವ ಚಿತ್ರವದು. ಈ ಸಂಕೇತವೇ ಅವರಿಗೆ ಬೆನ್‌ಜೀನ್‌ನ ಅಣುಸಂಯೋಜನೆಯ ಸ್ವರೂಪದ ರಹಸ್ಯವನ್ನು ಭೇದಿಸಲು ಸ್ಫೂರ್ತಿಯಾಯಿತಂತೆ. ನಮ್ಮ ಆಲೋಚನೆಗಳಿಗೂ ಕಾರ್ಯಗಳಿಗೂ ಅವುಗಳ ಸಿದ್ಧಿ–ಸಾಧನೆಗಳಿಗೂ ಕನಸುಗಳಿಗೂ ನೇರ ನಂಟಿರುವುದನ್ನು ತಳ್ಳಿಹಾಕಲಾಗದಲ್ಲವೆ?

ಮುಲ್ಲಾನ ಕಥೆಗೆ ಬರೋಣ. ಕನಸಿನಲ್ಲಿ ಅವನಿಗೆ ನಾಣ್ಯಗಳು ದೊರೆಯುತ್ತಿದ್ದವು. ಆದರೆ ಅವನು ಅದರಿಂದ ಕನಸಿನಲ್ಲೂ ಸುಖ ಪಡಲು ಆಗದೆಹೋಯಿತು. ಅದಕ್ಕೆ ಕಾರಣ ಎಚ್ಚರ–ಕನಸು–ನಿದ್ರೆ – ಈ ಮೂರು ಸ್ಥಿತಿಗಳಲ್ಲೂ ಅವನಲ್ಲಿದ್ದ ಅವನದ್ದೇ 'ಗುಣ'. ಅದುವೇ ಅತಿಯಾಸೆ. ಈ ಅತಿಯಾಸೆಯನ್ನು ಪೋಷಿಸಿದ್ದು ಅವನ ಸೋಮಾರಿತನ. ಇದು ಅವನ ಸಹೋದರನಾದ ತಿರುಕನಲ್ಲಿಯೂ ಎದ್ದುಕಾಣುತ್ತದೆ. ಮುಲ್ಲಾನಿಗೆ ವಾಸ್ತವ–ಅವಾಸ್ತವಗಳ ಪರಿವೆಯೂ ಇರಲಿಲ್ಲ. ಎಚ್ಚರವಾದ ಮೇಲೆ ಅವನು ಒಂಬತ್ತು ನಾಣ್ಯಗಳಿಗೆ ರಾಜಿಯಾಗಲು ಸಿದ್ಧನಾಗುತ್ತಾನೆ. ಆದರೆ ಒಂಬತ್ತಲ್ಲ, ಒಂದು ಕೂಡ ಅವನಿಗೆ ಸಿಗುವ ಸಂಭವ ಇರಲಿಲ್ಲ. ಕಾರಣ, ಅವನು ಎಲ್ಲೋ ಕಳೆದುಕೊಂಡು ಮತ್ತೆಲ್ಲೋ ಹುಡುಕುತ್ತಿದ್ದಾನೆ. ನಾವೂ ಅಷ್ಟೇ, ಕಲಿಯುವ ವಯಸ್ಸಿನಲ್ಲಿ ಮಜಾ ಉಡಾಯಿಸುತ್ತೇವೆ; ಕಲಿಯುವ ವಯಸ್ಸು ದಾಟಿದ ಮೇಲೆ –ಇತ್ತ ಕಲಿಕೆಯೂ ಇಲ್ಲ, ಅತ್ತ ಸುಖವೂ ಇಲ್ಲ ಎನ್ನುವಂತಾಗಿರುತ್ತದೆ ನಮ್ಮ ಸ್ಥಿತಿ. ಹೀಗೆಯೇ ತಿನ್ನುವ ಕಾಲದಲ್ಲಿ ಲೋಭದಿಂದ ಸಂಗ್ರಹಿಸುತ್ತೇವೆ; ತಿನ್ನುವ ಮನಸ್ಸಾದಾಗ ತಿನ್ನಲಾರದಂಥ ಅವಸ್ಥೆಯನ್ನು ತಂದುಕೊಂಡಿರುತ್ತೇವೆ. ದೇಶ–ಕಾಲಗಳಿಗೆ ಮಹತ್ವವಿದೆ; ಯಾವ ಸ್ಥಳದಲ್ಲಿ ಏನು ಮಾಡಬೇಕೋ ಅದನ್ನೇ ಮಾಡಬೇಕು; ಯಾವ ಕಾಲದಲ್ಲಿ ಹೇಗೆ ನಡೆದುಕೊಳ್ಳಬೇಕೋ ಹಾಗೆಯೇ ನಡೆದುಕೊಳ್ಳಬೇಕು. ಈ ಗುಣವನ್ನೇ ಡಿವಿಜಿಯವರು 'ಸ್ವಸ್ಥಾನಪರಿಜ್ಞಾನ' ಎಂದು ಒಕ್ಕಣಿಸಿದ್ದಾರೆ. ಈ ಗುಣ ನಮಗೆ ಸ್ವಾಧೀನವಾಗಲು ಔಚಿತ್ಯಪ್ರಜ್ಞೆ ನಮ್ಮಲ್ಲಿ ಎಚ್ಚರವಾಗಿರಬೇಕಾಗುತ್ತದೆ. ಈ ಎಚ್ಚರಕ್ಕೆ ವಾಸ್ತವ–ಅವಾಸ್ತವಗಳ ನೆಲೆಯ ಮೇಲೆ ನಮ್ಮ ಅರಿವು ನಿಂತಿರಬೇಕಾಗುತ್ತದೆ.

ನಮ್ಮ ಜೀವನಪೂರ್ತಿ ವಾಸ್ತವ–ಅವಾಸ್ತವಗಳ ಕಣ್ಣುಮುಚ್ಚಾಲೆ ಆಟ ನಡೆದೇ ಇರುತ್ತದೆ. ಇದೊಂದು ರೀತಿಯಲ್ಲಿ ಬೆಳಕು–ಕತ್ತಲೆಗಳ ಆಟವೂ ಹೌದು; ಎಚ್ಚರ–ಕನಸುಗಳ ಮಿಶ್ರಣವೂ ಹೌದು. ಇವು ಒಂದು ಇನ್ನೊಂದನ್ನು ಬಿಟ್ಟು ಇರಲಾರದು; ಆದರೆ ನಮಗೆ ಅವುಗಳ ಮೂಲನೆಲೆಯ ಗುರುತು ಇರಬೇಕು. ಇಲ್ಲವಾದಲ್ಲಿ ಗೊಂದಲಗಳಿಂದ ಎಚ್ಚರದ ಕಸುವನ್ನೂ ಕನಸಿನ ಸೊಗಸನ್ನೂ ಕಳೆದುಕೊಳ್ಳಬೇಕಾಗುತ್ತದೆ.

ಹೆಂಡತಿಗೆ ಗಂಡ ಹೇಳಿದ: 'ನೀನು ರಾತ್ರಿ ಕನಸಿನಲ್ಲಿ ನನ್ನನ್ನು ತುಂಬ ಬಯ್ಯುತ್ತಿದ್ದೆ.'

ಹೆಂಡತಿ: 'ಅದು ನಿಮ್ಮ ಊಹೆಯಷ್ಟೆ!'

ಗಂಡ, ಕೋಪದಿಂದ: 'ಯಾವುದು ಊಹೆ?'

ಹೆಂಡತಿ: 'ನಾನು ನಿದ್ರೆ ಮಾಡುತ್ತಿದ್ದೆ ಎಂದು ನೀವು ಅಂದುಕೊಂಡದ್ದು.'

ಹೌದು, ನಮಗೆ ಎಚ್ಚರ ಯಾವುದು, ಕನಸು ಯಾವುದು – ಎನ್ನುವುದರ ಅರಿವು ಇಲ್ಲದಿದ್ದಾಗ, ನಮ್ಮ ಪಾಡು ಗೊಂದಲದ ಬೀಡಾಗಿ, ಇರುವ ನೆಮ್ಮದಿಯನ್ನೂ ಕಳೆದುಕೊಳ್ಳಬೇಕಾಗುತ್ತದೆ.

✿